ಸೂಚನೆ : 1. ಸೋಯಬೆಳೆಯಲ್ಲಿ ಪ್ರಮಾಣಿತ ಬೀಜ ಲಭ್ಯವಿರುವುದರಿಂದ ನಿಜ ಚೀಟಿ ಬೀಜ ಪರಿಗಣಿಸಿರುವುದಿಲ್ಲ.

2. ನೆಲಗಡಲೆ ಬೆಳೆಯಲ್ಲಿ ಐಸೋಪಾಮ್ ಯೋಜನೆಯಂತೆ ರಿಯಾಯಿತಿ ನೀಡಲಾಗಿದೆ.

3. ಪ್ರತಿ ಕೆ.ಜಿ. ರಿಯಾಯಿತಿ ದರವನ್ನು ಹತ್ತಿರದ ರೂಪಾಯಿಗೆ ನಿಗದಿಪಡಿಸಿದೆ.

1341 (1514) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳೆ ಹಾನಿಯನ್ನು ಹಾಗೂ ಕ್ರಿಮಿ ಕೀಟವನ್ನು ತಡೆಯಲು ರೈತರಿಗೆ ಯಾವ ಯಾವ ರೀತಿಯ ಔಷಧಿಯನ್ನು ಸರ್ಕಾರದ ವತಿಯಿಂದ ವಿತರಿಸಲಾಗುತ್ತಿದೆ ;

ಆ) ಈ ಔಷಧಿಗಳಿಗೆ ಸರ್ಕಾರದ ವತಿಯಿಂದ ದೊರೆಯುವ ರಿಯಾಯಿತಿ ಎಷ್ಟು ;

ಇ) ಈ ಔಷಧಿಗಳ ಮೂಲ ಬೆಲೆ ಎಷ್ಟು ;

ಈ) ಈ ಔಷಧಿಗಳು ರೈತರಿಗೆ ಸುಲಭವಾಗಿ ದೊರೆಯುವಂತಾಗಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಬಂಡೆಪ್ಪ ಕಾಶಂಪುರ್ (ಕೃಷಿ ಸಚಿವರು) –

ಅ) ವಿವಿಧ ಬೆಳೆಗಳಿಗೆ ಬೀಳುವ ರೋಗ ಮತ್ತು ಕೀಟಗಳ ಹತೋಟಿಗೆ ಕೀಟನಾಶಕಗಳು, ಶಿಲೀಂದ್ರನಾಶಕಗಳು, ಜೈವಿಕ ಪೀಡೆ ನಾಶಕಗಳನ್ನು, ಕಳೆಗಳ ಹತೋಟಿಗೆ ಕಳೆನಾಶಕಗಳನ್ನು ಮತ್ತು ಇಲಿ ನಾಶಕಗಳನ್ನು ಇವೇ ಮೊದಲಾದವುಗಳನ್ನು ರಿಯಾಯಿತಿದರಲ್ಲಿ ನೀಡಲಾಗುತ್ತಿದೆ.

ಆ) ಶೇ.50ರಂತೆ ಗರಿಷ್ಠ ಹೆಕ್ಟೇರ್‌ಗೆ ರೂ.500/ರಂತೆ

ಇ) ಕರ್ನಾಟಕ ಪಾರದರ್ಶಕ ಕಾಯಿದೆಯನ್ವಯ ಟೆಂಡರ್ ಕರೆದು ಕನಿಷ್ಠ ದರ ನಿಗಧಿಪಡಿಸಿರುತ್ತದೆ.

ಈ) ಇವುಗಳನ್ನು ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಮಾಡಿ ವಿತರಿಸಲಾಗುತ್ತಿದೆ.

1342 (1515) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯಾದ್ಯಂತ ಕೆಟ್ಟಿರುವ ಕೊಳವೆ ಬಾವಿಗಳೆಷ್ಟು ;